Reg. No. : ..................................

Name : ..........................................

**FY 1004**

# FIRST YEAR HIGHER SECONDARY EQUIVALENCY EXAMINATION, JULY 2025

## Part – II

## KANNADA

**Maximum : 80 Scores**

Time : 2½ Hours

Cool-off Time : 15 Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ ಕೂಲ್ ಆಫ್ ಸಮಯವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**Score**

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **(4×1=4)**

1. ನನ್ನ ಬೆನ್ನು ಎಂಬ ಲಲಿತ ಪ್ರಬಂಧವನ್ನು ಬರೆದ ಲೇಖಕರು ಯಾರು ?

   (ನಾ ಕಸ್ತೂರಿ, ಜಿ. ಎಸ್. ಶಿವರುದ್ರಪ್ಪ, ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮ)

2. ಭೀಮನಾಯಕ ಎಂಬ ಕಥಾ ಪಾತ್ರವು ಕಂಡುಬರುವ ಪಾಠಭಾಗ ಯಾವುದು ?

   (ಮರಸುಬೇಟೆ, ಕಳ್ಳರ ಗುರು, ಬೆಳ್ವಾಡಿಯ ಮಲ್ಲಮ್ಮ, ನೀಲಿಯಿಂದ ನೆಲಕ್ಕೆ)

3. ಮರಸುಬೇಟೆ ಎಂಬ ಪಾಠಭಾಗವು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತದೆ ?

   (ಕಥೆ, ಕವನ, ಕಥನ ಕವನ, ಕಾದಂಬರಿ)

4. ಕೂಡಲಸಂಗಮದೇವ ಎಂಬ ಅಂಕಿತ ಯಾರ ವಚನಗಳಲ್ಲಿ ಕಂಡುಬರುತ್ತದೆ ?

   (ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಜೇಡರ ದಾಸಿಮಯ್ಯ)

Score

5 ರಿಂದ 9 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಯಂತೆ ಉತ್ತರಿಸಿರಿ. (4×1=4)

5. ನಯನ – ಈ ಪದದ ಅರ್ಥವೇನು ?

6. ಭಾವಾವೇಶ – ಈ ಪದವನ್ನು ವಿಂಗಡಿಸಿ ಬರೆಯಿರಿ.

7. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

   ಬೆಳಕು ಹರಿಯುವ ಮೊದಲೇ ಕಳ್ಳರು ಅಲ್ಲಿಂದ <u>ಪಲಾಯನ</u> ಮಾಡಿದ್ದರು.

8. ಬೆಳ್ವಾಡಿಯ ಮಲ್ಲಮ್ಮ – ಈ ಕೃತಿಯ ಕರ್ತೃ ಯಾರು ?

9. ಇರುಳು – ಇದರ ವಿರೋಧ ಪದವನ್ನು ಬರೆಯಿರಿ.

10 ರಿಂದ 14 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ. (4×2=8)

10. ಕರ್ಣನು ತನ್ನ ದೇಹ ಕವಚವನ್ನು ಕತ್ತರಿಸಿ ಯಾರಿಗೆ ಕೊಟ್ಟನು ?

11. ಕರಿಗಳನು ಮುರಿದಿಡುವ ಸಿಂಹಕೆ ನರಿಗಳಿದಿರೆ – ಈ ಮಾತನ್ನು ಯಾರು ಯಾರಿಗೆ ಹೇಳಿದರು ?

12. ನೆರೆಕರೆಗೆ ನಾವು ಯಾವುದನ್ನು ಹಂಚಬಾರದು ?

13. ಹಳುವಿನೆಡೆಯಲ್ಲಿ ಕಂಡ ಯಾವ ದೃಶ್ಯವು ಬೇಟೆಗಾರನನ್ನು ದಂಗುಬಡಿಸಿತು ?

14. ಪರಿಸರ ಸಂರಕ್ಷಣೆಯ ಸಂದೇಶವನ್ನು ನೀಡುವ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

15 ರಿಂದ 19 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ. (4×3=12)

15. ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಬರೆಯಿರಿ.

    ಅಲ್ಲಿ ನೋಡಿರಿ ನಮ್ಮ ಪಟೇಲರು ಮುಂದಿನ ಸೀಟಿನಲ್ಲಿ ತೆಪ್ಪಗೆ ಕೂತಿರೋದನ್ನ ಎಂದು ಚಿತ್ರದುರ್ಗದವರು ಹೇಳಿದರು.

16. ಕನ್ನಡಪರ ಹೋರಾಟದಲ್ಲಿ ಕಳ್ಳಿಗೆ ಮಹಾಬಲ ಭಂಡಾರಿಯವರು ವಹಿಸಿದ ಪಾತ್ರವೇನು ?

17. ಸ್ವರ್ಗ ನರಕಗಳ ಬಗ್ಗೆ ಬಸವಣ್ಣನವರ ನಿಲುವೇನು ? ಬರೆಯಿರಿ.

18. ಕೆಳಗೆ ಕೊಟ್ಟಿರುವ ವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

    ಯಕ್ಷಗಾನವು ಒಂದು ದೃಶ್ಯ ಕಲೆಯಾಗಿದ್ದು ಅದು ಹಾಡು ಕುಣಿತ ಎರಡನ್ನೂ ಒಳಗೊಂಡಿದೆ.

Score

19. ಯಾವುದಾದರೂ ಮೂರು ಯಕ್ಷಗಾನ ಮೇಳಗಳನ್ನು ಹೆಸರಿಸಿರಿ.

20. ಹೊಂದಿಸಿ ಬರೆಯಿರಿ. (4×1=4)

| ಅ | ಆ |
|---|---|
| ಪ್ರಕೃತಿ | ಬಿ.ಎಂ.ಶ್ರೀ. |
| ಕರುಣಾಳು ಬಾ ಬೆಳಕೆ | ಶಿವರಾಮ ಕಾರಂತ |
| ಯಕ್ಷಗಾನ ಬಯಲಾಟ | ಬೆಟಗೇರಿ ಕೃಷ್ಣಶರ್ಮ |
| ಕಳ್ಳರ ಗುರು | ಕಯ್ಯಾರ ಕಿಞ್ಞಣ್ಣ ರೈ |

**21 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** (4×4=16)

21. ಕೆಳಗೆ ಕೊಟ್ಟಿರುವ ಪದ್ಯದ ಆಶಯವನ್ನು ಬರೆಯಿರಿ.

ಜಗದೆ ನೀಂ ಕೊಂಡದ್ದೆ ಜಗಕೆ ನೀಂ ಕೊಟ್ಟದ್ದೆ
ಮಿಗಿಲಾವುದೆರಡರೊಳು ನಿನ್ನ ಬೆಲೆಯೇನು
ಬಗೆಯದೀ ಲೆಕ್ಕವನು ಜಗದುಣಿಸನುಂಬವನು
ಮೃಗಮಾತ್ರನಲ್ಲವೇ ? ಮರುಳ ಮುನಿಯ ||

22. ಜಾಗತಿಕ ತಾಪಮಾನವನ್ನು ತಡೆಗಟ್ಟುವ ಕಾರ್ಯಚಟುವಟಿಕೆಗಳ ಕುರಿತು ಟಿಪ್ಪಣಿ ಸಿದ್ಧಪಡಿಸಿರಿ.

23. ಮಾತೃಭಾಷೆಯಲ್ಲಿ ಶಿಕ್ಷಣ ಎಂಬುದರ ಕುರಿತು ನಿಮ್ಮ ಅಭಿಪ್ರಾಯಗಳನ್ನು ನಿರೂಪಿಸಿರಿ.

24. ಯಕ್ಷಗಾನದ ಚೌಕಿಯ ವಿಶೇಷತೆಗಳ ಕುರಿತು ಬರೆಯಿರಿ.

25. ಬಸ್ಸಿನಲ್ಲಿ ಲೇಖಕರು ಎಲ್ಲರ ಕಡೆಗೂ ಒಮ್ಮೆ ನೋಡಿ ಕುಳಿತುಕೊಳ್ಳಲು ಕಾರಣವೇನು ?

**26 ರಿಂದ 30 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ವಿವರವಾಗಿ ಉತ್ತರಿಸಿರಿ.** (4×6=24)

26. 'ನಿದ್ರಾ ಬರದೊಳಿರ್ದರ ಕೋಲುವುದುಚಿತವೇ' ಎಂಬ ಕಾವ್ಯಭಾಗದಲ್ಲಿ ನಳನಿಗೆ ರಾಜಹಂಸವು ನೀಡಿದ ನೀತಿಯ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

27. ಪ್ರೇಕ್ಷಣೀಯ ಸ್ಥಳವೊಂದಕ್ಕೆ ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ವಿವರವಾಗಿ ಬರೆಯಿರಿ.

Score

28. 'ಕರುಣಾಳು ಬಾ ಬೆಳಕೆ' ಕವಿತೆಯ ಆಶಯವೇನು ? ವಿವರಿಸಿರಿ.

29. ಬೇಟೆಗಾರನು ಹಿಂಸೆಯನ್ನು ಬಿಟ್ಟು ಅಹಿಂಸೆಯ ಮಾರ್ಗವನ್ನು ಸ್ವೀಕರಿಸಲು ಕಾರಣವಾದ ಘಟನೆಯನ್ನು ಮರಸುಬೇಟೆ ಕಥನ ಕವನದ ಆಧಾರದಲ್ಲಿ ನಿರೂಪಿಸಿರಿ.

30. ದುರ್ಯೋಧನನಿಗೆ ಕರ್ಣನ ಮೇಲಿರುವ ಪ್ರೀತಿ ಮತ್ತು ಗೌರವವನ್ನು ನೀವು ಓದಿದ ಪಾಠದ ಹಿನ್ನೆಲೆಯಲ್ಲಿ ವಿವರಿಸಿರಿ.

**31 ಮತ್ತು 32 ರ ಪ್ರಶ್ನೆಗಳಲ್ಲಿ ಯಾವುದಾದರೂ ಒಂದರ ಕುರಿತು ವಿವರವಾಗಿ ಬರೆಯಿರಿ.** **(1×8=8)**

31. ಪರಿಸರ ಸಂರಕ್ಷಣೆಯ ಕುರಿತು ಜಾಗೃತಿಯನ್ನು ಮೂಡಿಸುವ ಪ್ರಬಂಧವೊಂದನ್ನು ಬರೆಯಿರಿ.

32. ಕಳ್ಳರ ಗುರು ಕಥೆಯಲ್ಲಿ ಬರುವ ಭೀಮನಾಯಕನ ಪಾತ್ರ ಚಿತ್ರಣ ಮಾಡಿರಿ.